ಕುಡಿಯುವ ನೀರನ್ನು ಏಳೆಂಟು ಗ್ರಾಮಗಳಿಗೆ ಮಲಪ್ರಭ ನದಿಯಿಂದ ಜಾಕ್‌ವೆಲ್ ಮಾಡಿ ನಿಶ್ಚಿತವಾದಂಥ ಒಂದು ಯೋಜನೆಯನ್ನು ಮಾಡಿ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ಮಾನ್ಯಸಚಿವರಲ್ಲಿ ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯಸದಸ್ಯರು ತಿಳಿಸಿದಂತೆ 133 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಿದೆ. ಅವರು ತಿಳಿಸಿದಂತಹ ಸೋಮಾಪುರ. ಆಚಮಟ್ಟಿ, ಶಿವಾಪುರ, ಸಪಡ್ಲ, ತಲ್ಲೂರು ಗ್ರಾಮಗಳಲ್ಲಿ ಮೊದಲು ತಲಾ 40ಲೀಟರ್ ನೀರನ್ನು ಒಬ್ಬರಿಗೆ ಕೊಡಬೇಕಾಗಿತ್ತು, ಜಲಮೂಲಗಳು ಬಹಳ ಕಡಿಮೆಯಾಗಿರುವುದರಿಂದ ಮತ್ತು ಅಂತರ್‌ಜಲ ಕಡಿಮೆಯಾಗಿರುವುದರಿಂದ ತಲಾ 20-22 ಲೀಟರ್‌ಗೆ ಬಂದಿದೆ. ಆದರೆ ಎಲ್ಲ ಗ್ರಾಮಗಳಿಗೂ ಕಿರು ನೀರಾವರಿ ಯೋಜನೆ ಮೂಲಕ ನೀರು ಸರಬರಾಜು ಒದಗಿಸಿ ಎರಡು ಮೂರು ಕಡೆಗೆ ಕೊಳವೆಬಾವಿಯನ್ನು ಮಾಡಿ ಕೈಪಂಪು ಅಳವಡಿಸುವ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಆದರೆ ಈವೊಂದು ಕಾರ್ಯಕ್ರಮದಲ್ಲಿ 1995Ë96ನೇ ಸಾಲಿಗೆ ಸೋಮಾಪುರ ನಡುವಿದಡ್ಡಿ ಊಚಿದೋಣಿದಡ್ಡಿ ಗ್ರಾಮಗಳಿಗೆ ಸಂಯುಕ್ತ ನೀರು ಸರಬರಾಜು ಯೋಜನೆ ಮಾಡುವುದಕ್ಕೆ ಪ್ರಸ್ತಾವ ಬಂದಿದೆ. ಈ ವರ್ಷದಲ್ಲಿ ಅಧನ್ನು ನಾವು ರಾಜ್ಯ ವಲಯದ ಅನುಬಂಧ (ಇ) ನಲ್ಲಿ ಸೇರಿಸಿಕೊಂಡು ಕಾಮಗಾರಿಯನ್ನು ಕೈಗೆತ್ತಿ ಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಚಂದ್ರಶೇಖರ ಎಂ ಮಾಮನಿ : ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದ ಒಂದು ಕ್ಷೇತ್ರದಲ್ಲಿ ಈಗ ಇರುವ ನೀರು ಸರಬರಾಜು ವ್ಯವಸ್ಥೆ ಸರಿಯಿಲ್ಲ. ಅದಕ್ಕೆ ಇಂಡಿಪೆಂಡೆಂಟಾಗಿ ಒಂದು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ ಅದು ಒಂದು ಯಾತ್ರಾಸ್ಥಳವಾಗಿರುವುದರಿಂದ ಮಾನ್ಯ ಸದಸ್ಯರ ಸಲಹೆಯನ್ನು ಗಂಭೀರವಾಗಿ ಸರ್ಕಾರ ಪರಿಗಣಿಸಿ ಸೂಕ್ತ ಪರಿಹಾರ ಕಂಡುಹಿಡಿಯುತ್ತದೆ.

ಹುಬ್ಬಳ್ಳಿಯಲ್ಲಿ ರೇಷನ್‌ಕಾರ್ಡ್‌ಗಳ ವಿತರಣೆ

334 : ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರದಲ್ಲಿ ಹತ್ತು ಸಾವಿರಕ್ಕೂ ಮೇಲ್ಪಟ್ಟು ಹೊಸ ರೇಶನ್ನ್ ಕಾರ್ಡ್‌ಗಳ ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ :

ಆ) ಹಾಗಿದ್ದಲ್ಲಿ ಹೊಸ ರೇಶನ್‌ಕಾರ್ಡ್‌ಗಳನ್ನು ವಿತರಿಸಲು ಸರ್ಕಾರದವರು ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : (ಅ) ಹೌದು.

ದಿನಾಂಕ 29-7-95ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಅರ್ಹ ಅರ್ಜಿದಾರರಿಗೆ ವಿತರಿಸಲು ಜಿಲ್ಲಾಧಿಕಾರಿಗಳ ಬೇಡಿಕೆ ಮೇರೆಗೆ ಲಭ್ಯವಿರುವ ಪಡಿತರ ಚೀಟಿಗಳ ಪೈಕಿ 1500 ಫೋಟೋ ಪಡಿತರ ಚೀಟಿಗಳನ್ನು ಧಾರವಾಡ ಜಿಲ್ಲೆಗೆ ಬಿಡುಗಡೆ ಮಾಡಿದೆ. ಅಲ್ಲದೆ ದಿನಾಂಕ 15-8-95 ರಿಂದ 15-10-95ರ ವರೆಗೆ ಪಟಿತರ ಚೀಟಿಗಳ ತನಿಖಾ ಕಾರ್ಯಕ್ರಮವನ್ನು ಅಂದರೆ ನಕಲಿ ಪಡಿತರ ಚೀಟಿಗಳ ತನಿಖಾ ಕಾರ್ಯಕ್ರಮವನ್ನು

ಹಮ್ಮಿಕೊಂಡಿರುವುದರಿಂದ ದಿನಾಂಕ 15-10-95ರ ನಂತರ ಬೇಡಿಕೆ ಮೇರೆಗೆ ಇನ್ನುಳಿದ ಪಡಿತರ ಚೀಟಿಗಳನ್ನು ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಗಳು ಹುಬ್ಬಳ್ಳಿ ಮಹಾನಗರದಲ್ಲಿ 10,000ಕ್ಕೂ ಮೇಲ್ಪಟ್ಟು ಪಡಿತರ ಚೀಟಿಗಳು ಬಿಡುಗಡೆಯಾಗಲು ಬಾಕಿಯಿವೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಉತ್ತರದಲ್ಲಿ ಹೇಳಿದ ಪ್ರಕಾರ ಧಾರವಾಡ ಜಿಲ್ಲೆಗೆ 1,500 ಪಡಿತರ ಚೀಟಿಗಳನ್ನು 29-7-95ಕ್ಕೆ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾನು ಪ್ರಶ್ನೆ ಕಳುಹಿಸಿದ್ದು 27ನೇ ತಾರೀಖು, 29ನೇ ತಾರೀಖು ಬಿಡುಗಡೆ ಮಾಡಿದ್ದಾರೆ ಇರಲಿ ಒಳ್ಳೆಯದು. ಆದರೆ ಇಡೀ ಧಾರವಾಡ ಜಿಲ್ಲೆಗೆ 1,500 ಮಾಡಿದ್ದಾರೆ, ಹುಬ್ಬಳ್ಳಿ ಮಹಾನಗರದಲ್ಲೇ 10,000ಕ್ಕೂ ಮೇಲ್ಪಟ್ಟು ಬೇಡಿಕೆ ಇವೆ ಅಂದರೆ ಹುಬ್ಬಳ್ಳಿಗೆ ಎಷ್ಟು ಬಂದುರಬಹುದು ಇದಕ್ಕೆ ಸ್ಪಷ್ಟನೆ ಇಲ್ಲ ಮತ್ತು 2-3 ವರ್ಷಗಳಿಂದ ರೀತಿಯ ಬೇಡಿಕೆ ಇದೆ, ಹುಬ್ಬಳ್ಳಿ ಮಾಹಾನಗರದಲ್ಲಿ ಆದರೆ ಬಿಡುಗಡೆ ಮಾಡಿದ್ದು 29 ನೇ ತಾರೀಖು ಮತ್ತು ಉಳಿದ ಪಡಿತರ ಚೀಟಿಗಳನ್ನು ಬಿಡುಗಡೆ ಮಾಡಲಿಕ್ಕೆ ಏನು ತೊಂದರೆ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು ಎಂದು ಕ್ಶಿಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಂಜಪ್ಪನವರೇ, ಅವರು ಹುಬ್ಬಳ್ಳಿ ಕ್ಷೇತ್ರದವರು , ಅವರು ಕ್ಷೇತ್ರವನ್ನು ಗಮನದಲ್ಲಿಟ್ಟುಕೊಂಡು ಈ ಪ್ರಶ್ನೆಯನ್ನು ಕೇಳಿದ್ದಾರೆ ನೀವು ಧಾರವಾಡದ್ದು ಉತ್ತರ ಕೊಟ್ಟರೆ ಅವರಿಗೆ ಏನು ಪ್ರಯೋಜನ ?

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಧಾರವಾಡಕ್ಕೆ ಹೋಗಿ ಪರಿಶೀಲನೆ ಮಾಡಿದ್ದೇನೆ. ಅಲ್ಲಿ ಪ್ರತಿ ವರ್ಷ ಹಳ್ಳಿಗಳಿಂದ ಸರಾಸರಿ 1,400 ಜನರು ವಲಸೆ ಬಂದು ನೆಲಸುತ್ತಿದ್ದಾರೆ ಎಂದು ಮಾಹಿತಿ ಸಂಗ್ರಹ ಮಾಡಿದ್ದೇನೆ. 15-8-95 ರಿಂದ 15-10-95ರವರೆಗೆ ನಕಲಿ ಪಡಿತರ ಚೀಟಿಗಳನ್ನು ಎಲಿಮಿನೇಟ್ ಮಾಡಬೇಕು ಎಂದು ಹೇಳಿ ನಮ್ಮ ಧಾರವಾಡ ಜಿಲ್ಲೆಯ ಆಹಾರ ಇಲಾಖೆಯ ಎಲ್ಲಾ ನೌಕರರನ್ನು ಕರೆದುಕೊಂಡು ಹೋಗಿ ತಪಾಸಣೆ ಮಾಡಿ, ತಪಾಸಣೆಯ ಕಾರ್ಯ ಮುಗಿದ ನಂತರ, ಧಾರವಾಡ ಜಿಲ್ಲೆಗೆ ಅಗತ್ಯ ಬೀಳುವ ಎಲ್ಲಾ ಪಡಿತರ ಚೀಟಿಗಳನ್ನು ಒದಗಿಸಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ ಎನ್ನುವಂಥ ಉತ್ತರವನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ನೀಡಲು ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : 15-10-95 ಮತ್ತು ಇದರ ನಂತರ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದಾರೆ. ಎಷ್ಟು ಅವಧಿಯಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಸ್ಪಷ್ಟ ಮಾಡಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಅಲ್ಲಿ ಬಹಳ ಬೇಡಿಕೆ ಇದೆ, 2-3 ವರ್ಷಗಳಿಂದ ಜನ ರೇಷನ್ ಕಾರ್ಡ್ ಇಲ್ಲದೆ ಪರಿತಪಿಸುತ್ತಿದ್ದಾರೆ. ಆದ್ದರಿಂದ 15-0-95-ರ ನಂತರ ಎಷ್ಟು ಅವಧಿಯೊಳಗೆ ಅವರು ಪಡಿತರ ಚೀಟಿಗಳನ್ನು ಹಂಚುತ್ತಾರೆ, ಎಷ್ಟು ಹಂಚಲಿಕ್ಕೆ ಸಾಧ್ಯ ಇದೆ ಎನ್ನುವುದನ್ನು ದಯವಿಟ್ಟು ಮಂತ್ರಿಗಳು ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಮಾನ್ಯ ಮಂತ್ರಿಗಳು ಧಾರವಾಡ ಜಿಲ್ಲೆಗೆ ಭೇಟಿ ಕೊಟ್ಟಿದ್ದಾರೆ. ಭೇಟಿ ಕೊಟ್ಟು ಆದಮೇಲೆ ಅನೇಕ ಅಧಿಕಾರಿಗಳು ಕಾರ್ಡುಗಳ ತೊಂದರೆ ಇದೆ ಎಂದು ಹೇಳಿದ್ದಾರೆ, ಅದನ್ನು ಪೂರೈಸಬೇಕು ಎಂದು ಜನರೂ ಹೇಳಿದ್ದಾರೆ. ನಾವು ಶಾಸಕರೂ ಸಹಿತ ಅವರಿಗೆ ಆಗ್ರಹ ಮಾಡಿ ಹೇಳಿದ್ದೇವೆ. ಅನೇಕ ವರ್ಷಗಳಿಂದ ಈ ಕಾರ್ಡುಗಳ ವಿತರಣೆ ಸರಿಯಾಗಿ ಆಗಿಲ್ಲ ಮತ್ತು ಅನೇಕ ಖೊಟ್ಟಿ ಕಾರ್ಡುಗಳು ಸಹ ಇವೆ. ಅವನ್ನೆಲ್ಲಾ ನೋಡಿ ಈಗ ಸರಿಯಾದಂಥ ವಿತರಣೆ ಮಾಡಿ ಎಂದರೆ ಈವರೆಗೂ ಕೇವಲ 1,500 ಕಾರ್ಡುಗಳನ್ನು ಧಾರವಾಡ

ಜಿಲ್ಲೆಗೆ ಕೊಟ್ಟಿದ್ದಾರೆ ಎಂದರೆ ಇದರ ವಿತರಣೆ ಎಷ್ಟರಮಟ್ಟಿಗೆ ಸರಿಯಾಗುತ್ತಿದೆ ಎನ್ನುವುದನ್ನು ತಿಳಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ನಂಜಪ್ಪ : ಆದಷ್ಟು ಜಾಗ್ರತೆಯಾಗಿ ಕಾರ್ಡುಗಳನ್ನು ಒದಗಿಸಿಕೊಡುತ್ತೇವೆ. ಅಗತ್ಯ ಬೀಳುವ ಎಲ್ಲಾ ಕಾರ್ಡುಗಳನ್ನು ಮುದ್ರಣ ಮಾಡಲಿಕ್ಕಾಗಿ ಸರ್ಕಾರದ ಪ್ರೆಸ್‌ನಲ್ಲಿ ಕೊಟ್ಟಿದ್ದೇವೆ. ಅದಕ್ಕಾಗಿ ಬಹುಶಃ ಈ ತಿಂಗಳ ಆಖೈರಿಗೆ ಅಥವಾ ಮುಂದಿನ ತಿಂಗಳ ಹದಿನೈದರೊಳಗೆ ಎಲ್ಲಾ ತ್ರಿವರ್ಣ ಕಾರ್ಡುಗಳನ್ನು, ಅದು ಹಸಿರು ಕಾರ್ಡು ಇರಬಹುದು, ಅಥವಾ ಸಫ್ರಾನ್ (ಕೇಸರಿ) ಕಾರ್ಡು ಇರಬಹುದು ನಮಗೆ ಲಭ್ಯವಾಗುತ್ತದೆ. ಮೊದಲು ಈಗ ಬೋಗಸ್ ಕಾರ್ಡ್‌ಗಳನ್ನು ಎಲಿಮಿನೇಟ್ ಮಾಡಬೇಕು ಈ ಪಡಿತರ ಪದ್ಧತಿಯಿಂದ. ಆ ಕಾರ್ಯವನ್ನು ಮಾಡಿ ಎಲ್ಲಾ ಕಾರ್ಡುದಾರರಿಗೆ ಹೊಸ ಕಾರ್ಡುಗಳನ್ನು ಕೊಡುವಂಥ ವ್ಯವಸ್ಥೆ ಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ ಮತ್ತು ನಾನು ತಮ್ಮಲ್ಲಿ ಬಿನ್ನಹ ಮಾಡಿಕೊಳ್ಳುವುದು ಏನೆಂದರೆ, ಈ ಬೋಗಸ್ ಕಾರ್ಡ್ ಎಲಿಮಿನೇಟ್ ಮಾಡುವಂಥ ಕಾರ್ಯಕ್ರಮದಲ್ಲಿ ಎಲ್ಲಾ ಮಾನ್ಯ ಸದಸ್ಯರ ಸಹಕಾರವನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ 1992-93ರಿಂದ ಪ್ರತಿ ಜಿಲ್ಲಾಧಿಕಾರಿಗಳು ಐಡೆಂಟಿಫೈ ಮಾಡಿದಂಥ ಕಡುಬಡವರಿಗೆ ಯಾರಿಗೆ ಈ ಹಸಿರು ಕಾರ್ಡ್ ಸಿಕ್ಕಿಲ್ಲ, ಇದರ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಒಂದೊಂದು ಜಿಲ್ಲೆಯಲ್ಲಿ ಕನಿಷ್ಟ ಐವತ್ತು ಸಾವಿರಕ್ಕೂ ಹೆಚ್ಚು ಆ ರೀತಿಯ ಅರ್ಜಿಗಳು ಇವೆ. ಸುಮಾರು 10-12 ಲಕ್ಷ ಕಡು ಬಡವರು ಯಾರಿದ್ದಾರೆ, ಆ ಬಡವರಿಗೆ ನಿಮ್ಮ 3.20 ಪೈಸೆಯ ಅಕ್ಕಿಯ ಯೋಜನೆ ತಲುಪಬೇಕಾಗಿದೆಯೋ, ಅವನು ಎಲಿಜಿಬಲ್ ಇದ್ದರೂ ಸಹ ತಾವು ಕಾರ್ಡ್ ವಿತರಣೆ ಮಾಡಿಲ್ಲ, ಪ್ರಿಂಟ್ ಮಾಡುತ್ತಿದ್ದೇವೆ ಎನ್ನುವಂಥ ಕುಂಟು ನೆಪವನ್ನು ಹೇಳಿಕೊಂಡು ಆ ಬಡವರಿಗೆ ಆ ಸವಲತ್ತು ಸಿಗುತ್ತಿಲ್ಲ, ನಾನು ಸರ್ಕಾರಕ್ಕೆ ಸಲಹೆ ಕೊಡುವಂಥಾದ್ದು ಎಂದರೆ, ಯಾವುದೋ ರಾಜಕಾರಣಕ್ಕೆ ಆ ಕಾರ್ಡ್ ಮೇಲೆ ಇಂದಿರಾ ಗಾಂಧಿಯವರ ಫೋಟೋ ಇತ್ತೋ, ನಾಳೆ ಜಯಪ್ರಕಾಶ್‌ನಾರಾಯಣ್‌ರವರ ಫೋಟೋ ಬರುತ್ತೋ, ಮಹಾತ್ಮ ಗಾಂಧೀಜಿಯವರ ಫೋಟೋ ಬರುತ್ತೋ ಅದು ಮುಖ್ಯ ಅಲ್ಲ, ಬಡವನಿಗೆ ಕಾರ್ಡ್ ಸಿಕ್ಕಿ ಅಕ್ಕಿ ವಿತರಣೆ ಆಗಬೇಕು, ಗೋಧಿ ವಿತರಣೆ ಆಗಬೇಕು. ಅದಕ್ಕೋಸ್ಕರ ನೀವು ಕಾರ್ಡ್ ಪ್ರಿಂಟ್ ಆಗಿಲ್ಲ ಎನ್ನುವಂಥ ನೆಪವನ್ನು ಹೇಳದೇ ಯಾವುದಾದರೊಂದು ತಾಲ್ಲೂಕಿನ ತಹಸೀಲ್ದಾರರಿಗೆ, ಜಿಲ್ಲಾಧಿಕಾರಿಗೆ ಪವರ್ಸ್ ಕೊಟ್ಟು ಒಂದೊಂದು ಕಾರ್ಡನ್ನು ಅಲ್ಲೇ ಸೀಲ್ ಹಾಕಿ ನಾಳೆಯಿಂದ, ಈ ತಿಂಗಳಿಂದ ಅವನಿಗೆ, ಬಡವನಿಗೆ ಅಕ್ಕಿ, ಗೋಧಿ ವಿತರಣೆ ಮಾಡುವಂಥ ಕಾರ್ಯಕ್ರಮ ರೂಪಿಸಿ. ಅದು ಆದಮೇಲೆ ನಿಮಗೆ ಅನುಕೂಲ ಆದಾಗ ಆ ಕಾರ್ಡ್‌ಗಳನ್ನು ವಿತರಣೆ ಮಾಡಿ. ಇದು ಮಾಡದೇ ಇದ್ದರೆ ಸುಮಾರು 10 ಲಕ್ಷ ಜನರಿಗೆ ನಾವು ದ್ರೋಹ ಮಾಡಿದಂತಾಗುತ್ತದೆ. ಕಡು ಬಡವರು ನಿರ್ಗತಿಕರಾಗಿ ಬರಗಾಲ ಇರುವಂಥ ಈ ಕಾಲದಲ್ಲಿ ಬೀದಿಗೆ ನಿಲ್ಲುವಂಥ ಒಂದು ಸಂದರ್ಭ, ಕೈಗೆ ಕೆಲಸ ಇಲ್ಲದಿರುವಂಥ ಒಂದು ಕಾಲ. ಅದಕ್ಕೆ ನಿರ್ದಿಷ್ಟವಾಗಿ ನಾನು ತಮ್ಮ ಮೂಲಕ ಮಂತ್ರಿಯವರಿಂದ ಉತ್ತರ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದನೇಯ ತಾರೀಖಿನಿಂದ ತಾವು ಇದಕ್ಕೆ ಬೇಕಾದಂಥ ಕಾರ್ಡುಗಳನ್ನು ಅಲ್ಲಿ ತಹಸೀಲ್ದಾರ್ ಮೂಲಕ ಡಿ.ಸಿ.ಗೆ ಪವರ್ಸ್ ಕೊಟ್ಟು ವಿತರಣೆ ಮಾಡುವಂಥ ಕೆಲಸ ಪ್ರಾರಂಭ ಮಾಡುತ್ತೀರಾ ಎನ್ನುವುದಕ್ಕೆ ನಿರ್ದಿಷ್ಟವಾದ ಉತ್ತರವನ್ನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಈ ಅಕ್ರಮ ಪಡಿತರ ಚೀಟಿಗಳ ಬಗ್ಗೆ ಇದೇ ಸದನದಲ್ಲಿ ತಮ್ಮ ಮೂಲಕ ಮಾನ್ಯ ಆಹಾರ ಮಂತ್ರಿಗಳಿಗೆ ಕಳುಹಿಸಿದ್ದೆ. ಈ ಕ್ಷಣದವರೆಗೂ ಏನಾಗಿದೆ ಎನ್ನತಕ್ಕಂಥಾದ್ದು

ಇಲ್ಲ, ಆ ಒಂದು ಡಿಪೋ ಅಲ್ಲೆಯೇ ಇದೆ. ಯಾರು ಯಾರು ಇದಕ್ಕೆ ಅಕ್ರಮವಾಗಿ ಭಾಗಿಗಳಾಗಿದ್ದಾರೆ ಅವರು ಅಲ್ಲೇ ಇದ್ದಾರೆ. ಎಷ್ಟು ತಿಂಗಳುಗಳಾಯಿತು, ಹೋದ ಶಾಸನಸಭೆಯಲ್ಲಿ ತಮ್ಮ ಎದುರಿಗೆ ಇದನ್ನು ಇಲ್ಲಿ ಪ್ರದರ್ಶನವಾದದ್ದು, ತಮ್ಮ ಮೂಲಕ ಕಳುಹಿಸಿ ಕೊಟ್ಟೆ. ಮಾನ್ಯ ಆಹಾರ ಸಚಿವರು ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂದು ದಯವಿಟ್ಟು ತಿಳಿಸಿ ಬಿಟ್ಟರೆ, ಅಷ್ಟೇ ನಮಗೆ ಪುಣ್ಯ ಬಂತು ಎಂದು ನಾನು ಅಂದುಕೊಂಡಿದ್ದೇನೆ.

ಅಧ್ಯಕ್ಷರು : ಆಹಾರ ಸಚಿವರಿಗೆ ದಯಮಾಡಿ 2 ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡುವುದು ಬೇಡವೇ?

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೇ, ಈಗ ಕಾರ್ಡುಗಳು ಪ್ರಿಂಟ್ ಆಗಿ ಸಿದ್ಧವಾಗಿವೆ. ವಾಟಾಳರೇ ನಿಮ್ಮ ಪ್ರಶ್ನೆಗೆ ಆಮೇಲೆ ಉತ್ತರ ಕೊಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಕೇಳಿದಂಥ ಪ್ರಶ್ನೆಗೆ ಮತ್ತು ಚಂದ್ರಕಾಂತ ಬೆಲ್ಲದ್ ಅವರು ಕೇಳಿದ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ಕಾರ್ಡುಗಳನ್ನು ಹಂಚಲಿಕ್ಕೆ ಸಮಸ್ಯೆ ಇಲ್ಲ, ಆದರೆ ನಮ್ಮ ಈ ಪಡಿತರ ವ್ಯವಸ್ಥೆಯಲ್ಲಿ ಸಾಕಷ್ಟು ಬೋಗಸ್ ಕಾರ್ಡ್‌ಗಳು ಇವೆ ಎನ್ನುವುದನ್ನು ನಾವು ಈಗಾಗಲೇ ಕಂಡುಹಿಡಿದಿದ್ದೇವೆ. ಪ್ರತಿ ನ್ಯಾಯ ಬೆಲೆ ಅಂಗಡಿಯಲ್ಲೂ ಸಾಕಷ್ಟು ಬೋಗಸ್ ಕಾರ್ಡ್‌ಗಳು ಇವೆ. ಅವನ್ನು ತೆಗೆದು ಹಾಕಬೇಕು ಎನ್ನುವಂಥ ಉದ್ದೇಶ ನಮ್ಮಲ್ಲಿ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂತ್ರಿಗಳೇ, ಒಂದು ನಿಮಿಷ ತಾವು ಯೀಲ್ಡ್ ಆದರೆ ಹೇಳುತ್ತೇನೆ. ನಾವು ಬೋಗಸ್ ಕಾರ್ಡ್‌ಗಳ ಬಗ್ಗೆ ಚಿಂತೆ ಮಾಡುತ್ತಿಲ್ಲ, ಅವರಿಗೆ ಶಿಕ್ಷೆ ಮಾಡಿ, ಕ್ರಮ ತೆಗೆದುಕೊಳ್ಳಿ. ಯಾರು ನಿಜವಾಗಿ ಎಲಿಜಬಲ್ ಇದ್ದಾರೆ ಎಂದು ನಿಮ್ಮ ಡಿ.ಸಿ. ರಿಪೋರ್ಟ್ ಕೊಟ್ಟಿದ್ದಾರೋ, ಕಳೆದ 3-4 ವರ್ಷಗಳಿಂದ ತಡವಾಗಿದೆಯೋ, ಅದರ ಬಗ್ಗೆ ನಾನು ನೇರವಾಗಿ ತಮ್ಮಿಂದ ಉತ್ತರ ಬಯಸುತ್ತಿದ್ದೇನೆ. ಕಾರ್ಡು ಇಲ್ಲದಿದ್ದರೆ ನೀವು ಯಾವುದಾದರೂ ರೀತಿಯಲ್ಲಿ ಆ ವಿತರಣೆ ಕೆಲಸವನ್ನು ಒಂದನೇ ತಾರೀಖಿನಿಂದ ಪ್ರಾರಂಭ ಮಾಡುವುದಕ್ಕೆ ಆಗುತ್ತೋ, ಇಲ್ಲವೋ? ಎನ್ನುವುದನ್ನು ನೇರವಾಗಿ ಹೇಳಿ. ಬೋಗಸ್ ಕಾರ್ಡ್ ಇರುವವರ ಬಗ್ಗೆ ನೀವು ಏನು ಬೇಕಾದರೂ ಕ್ರಮ ತೆಗೆದುಕೊಳ್ಳಿ. ನಮ್ಮದು ಏನೂ ಅಭ್ಯಂತರವಿಲ್ಲ, ನನ್ನ ನೇರವಾದ ಪ್ರಶ್ನೆಗೆ ದಯಮಾಡಿ ಉತ್ತರ ಕೊಡಿ.

ಶ್ರೀ ಎಸ್. ನಂಜಪ್ಪ : ಈಗ 15ನೇ ತಾರೀಖಿನಿಂದ ಹೊಸ ಕಾರ್ಡು ಕೊಡಬೇಕು ಎಂದು ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಜೊತೆಗೆ ಎಲ್ಲಾ ಸಿಬ್ಬಂದಿಗಳನ್ನೂ ಹಾಕಿಕೊಂಡು ಆಯಾಯಾ ಜಿಲ್ಲೆಯಲ್ಲಿ ಯಾರು ಅರ್ಹರಿದ್ದಾರೆ, ಅವರಿಗೆ ಈಗಾಗಲೇ ಎನುಮರೇಟ್ ಮಾಡುತ್ತಿದ್ದಾರೆ, ಎನುಮರೇಷನ್ ಮಾಡಿದಂಥ ಅರ್ಹರಿಗೆ ಕಾರ್ಡ್ ಕೊಡುವಂಥಾದ್ದು, ಅನರ್ಹರನ್ನು ತೆಗೆದು ಹಾಕುವಂಥಾದ್ದು ಮತ್ತು ಹೊಸ ಕಾರ್ಡ್ ಕೊಡುವಂಥ ಕಾರ್ಯಕ್ರಮವನ್ನು ಬಹಳ ಶೀಘ್ರವಾಗಿ, ತೀವ್ರವಾಗಿ ನಾವು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಕಳೆದ ವಿಧಾನ ಸಭೆಯಲ್ಲಿ 70-80 ಬೋಗಸ್ ಕಾರ್ಡ್‌ಗಳನ್ನು ಕೊಟ್ಟಿದ್ದರು, ಆ ಅಂಗಡಿಯನ್ನು ನಾವು ಸಸ್ಪೆಂಡ್ ಮಾಡಿದ್ದೇವೆ. ಅವರಿಗೆ ಕಾರ್ಡ್‌ನ್ನು ಕೊಟ್ಟಿಲ್ಲ, ಅದರ ಬಗ್ಗೆ ತನಿಖೆ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಯಾರು ತಹಸೀಲ್ದಾರ್ ಇದರ ಹಿಂದೆ ಸೈನ್ ಮಾಡಿದ್ದಾರೆ, ಅವರನ್ನು ಬಿಟ್ಟರು. ಆ ಅಂಗಡಿಯವರು ಏನು ಮಾಡುತ್ತಾನೆ. ಅಂಗಡಿಯವನೊಂದಿಗೆ ಶಾಮೀಲಾಗಿರತಕ್ಕಂಥ ಅಧಿಕಾರಿಗಳು ಯಾರು, ಅವರ ಬಗ್ಗೆ ನೀವು ಏನು ಕ್ರಮ ಕೈಗೊಂಡಿದೆ ಎಂದು ನಾವು ಕೇಳಿದರೆ, ಅಂಗಡಿಯನ್ನು

ಮುಚ್ಚಿಸಿದ್ದೇವೆ, ನಾವು ತನಿಖೆಯನ್ನು ನಡೆಸುತ್ತಿದ್ದೇವೆ ಎಂದರೆ ತನಿಖೆ ನಡೆಸುವುದಕ್ಕೆ ಇದಕ್ಕೆ ಒಂದು ದೊಡ್ಡ ಆಯೋಗ ರಚನೆ ಆಗಬೇಕೇ? ಏನು ಸ್ವಾಮಿ ಇದು ಅರ್ಥವಿಲ್ಲದ್ದು?

ಅಧ್ಯಕ್ಷರು : ಮುಂದಿನ ಪ್ರಶ್ನೆ ನಿಮ್ಮದೇ ಮಾಟಾಳರೇ

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಪ್ರಶ್ನೆ ಕೇಳುವುದು ಸಮಾಧಾನ ಮಾಡಿಕೊಳ್ಳುವುದಕ್ಕೇ ಅಲ್ಲ. ಈಗ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ನಾನು ನೇರವಾಗಿ ಕೇಳುತ್ತಿದ್ದೇನೆ, ಆಗಸ್ಟ್ 15ನೇ ತಾರೀಖು ಸರ್ಕಾರದ ವ್ಯವಸ್ಥೆ ಎಲ್ಲ ಇದೆ, ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ, ಅಧಿಕಾರಿಗಳು ಇದ್ದಾರೆ, ಆಗಸ್ಟ್ 15ನೇ ತಾರೀಖು ಇಡೀ ರಾಜ್ಯದಲ್ಲಿ ಯಾರು ಎಲಿಜಿಬಲ್ ಇದ್ದಾರೆ, ಯಾರು ಅಧಿಕಾರಿಗಳಿಂದ ರಿಪೋರ್ಟ್ ಬಂದಿದೆ ಅವರಿಗೆ ವಿತರಣೆ ಮಾಡಿ, ಆಗಸ್ಟ್ 15-16ನೇ ತಾರೀಖಿನಿಂದ ನಿರ್ದಿಷ್ಟವಾಗಿ ಆ ಬಡವನಿಗೆ ಅಕ್ಕಿ ವಿತರಣೆ ಮಾಡುತ್ತೀರಾ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಕಡುಬಡವರಿಗೆ ಸಂಬಂಧಪಟ್ಟ ವಿಷಯವಾದ್ದರಿಂದ ಮತ್ತು ಮಂತ್ರಿಗಳಿಗೆ ಅದು ಕನ್ವಿನ್ಸ್ ಆಗಿರುವುದರಿಂದ ಆಗಸ್ಟ್ 15ನೇ ತಾರೀಖು ಇಡೀ ರಾಜ್ಯದಲ್ಲಿ ಯಾರು ಎಲಿಜಿಬಲ್ ಇದ್ದಾರೆ, ಆ ಬಡವರಿಗೆ ಕಾರ್ಡನ್ನು ವಿತರಣೆ ಮಾಡುತ್ತೇವೆ ಮತ್ತು ಅಕ್ಕಿ ನಿಷ್ಠೆಯಿಂದ ವಿತರಣೆ ಆಗುತ್ತದೆ ಎಂದು ನೀವು ಭರವಸೆ ಕೊಟ್ಟರೆ ಸಾಕು.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಮಾನ್ಯ ಯಡಿಯೂರಪ್ಪನವರು ಹೇಳಿದಂಥ ಪ್ರಶ್ನೆಗೆ ಈಗಾಗಲೇ ಬಡವರಿಗೆ 3 ರೂಪಾಯಿ 20 ಪೈಸೆ ದರದಲ್ಲಿ ತ್ರಿವರ್ಣಕಾರ್ಡಿನಲ್ಲಿ ಅಕ್ಕಿಯನ್ನು ಕೊಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು : ಸನ್ಮಾನ್ಯ ಸಚಿವರು ಗಮನಿಸಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಸರಳವಾದ, ಸ್ಪಷ್ಟವಾದ ಪ್ರಶ್ನೆಯನ್ನು ತಮ್ಮ ಮುಂದಿಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಗುರುತಿಸಿರುವಂಥ ಅರ್ಹ ಫಲಾನುಭವಿಗಳು ಯಾರಿದ್ದಾರೆ, ಅವರಿಗೆ ಖಚಿತವಾಗಿ ಯಾವ ತಾರೀಖಿನಿಂದ ಈ ಕಾರ್ಡನ್ನು ಹಂಚುತ್ತೀರಿ ಎಂದು ಕೇಳಿದ್ದಾರೆ. ದಯಮಾಡಿ ನೀವು ಅಷ್ಟಕ್ಕೇ ಸೀಮಿತವಾಗಿ ಉತ್ತರ ಕೊಡಿ.

ಶ್ರೀ ಎಸ್. ನಂಜಪ್ಪ : ಆಗಸ್ಟ್ 15 ರಿಂದ 2.10.95....

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ನಿಮಗೆ ಸಹಾಯ ಮಾಡುತ್ತಾರೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರ ಕೊಟ್ಟಿರತಕ್ಕಂಥ ಕಾರ್ಡುಗಳನ್ನು ನಾವು . ಯಾರೂ ಕಸಿದುಕೊಂಡಿಲ್ಲ. ಆ ಎಲ್ಲಾ ಕಾರ್ಡುಗಳಿಗೂ ಅಕ್ಕಿಯನ್ನು ಕೊಡುತ್ತಿದ್ದೇವೆ. ಆದರೆ ಕಾರ್ಡನ್ನು ರಿಪ್ಲೇಸ್‌ಮೆಂಟ್ ಮಾಡಬೇಕು ಎನ್ನುವಂಥಾದ್ದು ಏನಿದೆ, ಅದನ್ನು ಹಂತಹಂತವಾಗಿ ಮಾಡಬೇಕಾಗುತ್ತದೆ. ಕಾರ್ಡುಗಳನ್ನು ಪ್ರಿಂಟ್ ಮಾಡುವುದಕ್ಕೆ ಒಂದು ಕೋಟಿ ಚಿಲ್ಲರೆ ಹಣ ಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ. ಆದ್ದರಿಂದ ಹಿಂದಿನ ಸರ್ಕಾರ ಐಡೆಂಟಿಫಿಕೇಷನ್ ಮಾಡಿ ಕೊಟ್ಟಿರತಕ್ಕಂಥ ಯಾರು ಫಲಾನುಭವಿಗಳು ಇದ್ದಾರೆ, ಅವರು ಯಾರಿಗೂ ಅಕ್ಕಿ ಕೊಡುವುದನ್ನು ನಿಲ್ಲಿಸಿಲ್ಲ. ಅವರು ಏನು ಹೇಳುತ್ತಿದ್ದಾರೆ,

ಈ ಐಡೆಂಟಿಫಿಕೇಷನ್ ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ನಾನೇ ಐಡೆಂಟಿಫಿಕೇಶನ್ ಮಾಡುವುದಕ್ಕೆ ಫಾರ್ಮೆಟ್ ಅನ್ನು ಮಾಡಿದ್ದೇನೆ. ಅದು ಇನ್ನೂ ಪೂರ್ತಿಯಾಗಿಲ್ಲ, ನಾನು ಪ್ರತಿ ಜಿಲ್ಲೆಗೆ ಹೋಗಿ ನೋಡುತ್ತಿದ್ದೇನೆ. ಇದರ ಜೊತೆಗೆ ಇನ್ನೊಂದು ವಿಷಯವನ್ನು ತಿಳಿಸಬೇಕು ಎಂದರೆ, ಹಿಂದೆ ಐಆರ್‌ಡಿಪಿಯಲ್ಲಿ 84ಲಕ್ಷ ಕುಟುಂಬಗಳು ಇವೆಯೆಂದು ಗುರುತು ಮಾಡಿದ್ದಾರೆ. ಆದರೆ ಕಾರ್ಡು ಕೊಟ್ಟಿರತಕ್ಕಂಥಾದ್ದು 98 ಲಕ್ಷ ಜನರಿಗೆ. ಕೆಲವು ಜಿಲ್ಲೆಗಳಲ್ಲಿ ಮೂರು-ನಾಲ್ಕು ಸಾವಿರ ಬೋಗಸ್ ಕಾರ್ಡುಗಳನ್ನು ಏನು ಜನರು ತೆಗೆದುಕೊಂಡಿದ್ದಾರೆ ಅದನ್ನು ಪತ್ತೆಹಚ್ಚಿದ್ದಾರೆ. ಇನ್ನೂ ಈ ಕಾರ್ಯಕ್ರಮ ನಡೆಯುತ್ತಿದೆ. ಒಂದು ಕಡೆ 84 ಲಕ್ಷ ಬಡಕುಟುಂಬಗಳು ಎಂದು ಹೇಳುತ್ತಾರೆ, ಇನ್ನೊಂದು ಕಡೆ 98 ಲಕ್ಷ ಕಾರ್ಡುಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಬಡವರಿಗೆ ಕಾರ್ಡು ಕೊಟ್ಟಿರತಕ್ಕಂಥಾದ್ದನ್ನು ಐಡೆಂಟಿಫಿಕೇಶನ್‌ಗಾಗಿ ನಿಲ್ಲಿಸಿಲ್ಲ, ಹಿಂದೆ ಏನು ಮಾಡಿದ್ದಾರೆ, ಅದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಎಲ್ಲಿಯಾದರೂ ಒಂದು ವೇಳೆ ಮತ್ತೆ ಏನು ಎನ್ಯುಮರೇಶನ್ ಮಾಡುತ್ತಿದ್ದಾರೆ, ಅದರಲ್ಲಿ ತಪ್ಪಾಗಿಯೆಂದು ನಮ್ಮ ಗಮನಕ್ಕೆ ತಂದರೆ ಕೂಡಲೇ ನಾನು ಸೂಚನೆ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನಾನು ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡಿದಾಗ ಅವರು ಹೇಳಿರತಕ್ಕಂಥಾದ್ದು ಏನೆಂದರೆ, ಸುಮಾರು ಹತ್ತು ಲಕ್ಷ ಕಡುಬಡವರಿಗೆ, ರೆವಿನ್ಯೂ ಅಧಿಕಾರಿಗಳು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದಾರೆ. ಕಾಡು ರಿಪ್ಲೇಸ್‌ಮೆಂಟ್ ಮಾಡುವಂಥಾದ್ದು ಮಾಡಿ, ಅದರ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ, ಆದರೆ ರೆವಿನ್ಯೂ ಅಧಿಕಾರಿಗಳು ಏನು ಐಡೆಂಟಿಫೈ ಮಾಡಿದ್ದಾರೆ, ಅವರಿಗೆ ಕಾರ್ಡು ಸಿಕ್ಕಿಲ್ಲ, ಅವರು ಐಡೆಂಟಿಫೈ ಮಾಡಿರುವುದು ತಮಗೆ ತಲುಪಿದೆಯೋ ಇಲ್ಲವೋ? ಡಿ.ಸಿ. ಯವರೊಡನೆ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದಾಗ, ಜಿಲ್ಲಾಧಿಕಾರಿಗಳ ಸಭೆಯಲ್ಲಿ ಚರ್ಚೆ ಮಾಡಿದಾಗ ವರದಿಗಳನ್ನು ಕಳಿಸಿದ್ದೇವೆ ಎಂದು ಅವರು ಹೇಳಿದ್ದಾರೆ. ಆದ್ದರಿಂದ ಇವರಿಗೆ ಕಾರ್ಡು ಕೊಡುವ ವ್ಯವಸ್ಥೆಯನ್ನು ಆಗಸ್ಟ್ 15ರಿಂದ ಪ್ರಾರಂಭ ಮಾಡುತ್ತೀರಾ ಎಂಬುದು ನನ್ನ ನೇರವಾದ ಪ್ರಶ್ನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಅವರು ಆ ಲಿಸ್ಟ್‌ನ್ನು ಕಳಿಸಿಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನಮಗೆ ಯಾವ ಲಿಸ್ಟು ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗೆಂದರೆ ಅರ್ಥ ಏನು? ಇವರು ಅಧಿಕಾರಕ್ಕೆ ಬಂದಮೇಲೆ ಕಡುಬಡವರಿಗೆ 3 ರೂಪಾಯಿ 20 ಪೈಸೆ ಅಕ್ಕಿ ಸಿಕ್ಕಿಲ್ಲ, ಅವರ ಐಡೆಂಟಿಫೈ ಆಗಿಲ್ಲ, ಅವರ ವರದಿ ನಮ್ಮ ಗಮನಕ್ಕೆ ಬಂದಿಲ್ಲವೆಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆಯೇ? ಒಬ್ಬ ಮುಖ್ಯಮಂತ್ರಿಯಾಗಿ ರೆವಿನ್ಯೂ ಅಧಿಕಾರಿಗಳು ಏನು ವರದಿಯನ್ನು ಕಳಿಸಿದ್ದಾರೆ, ಅದು ಕಳಿಸಿಲ್ಲವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸಭಾನಾಯಕರು ಒಂದು ಮಾತನ್ನು ಹೇಳಿದರು. ನಾವು ಅಧಿಕಾರಕ್ಕೆ ಬಂದಮೇಲೆ ಒಂದು ಹೊಸ ಫಾರ್ಮೆಟ್ ಅನ್ನು ಎಲ್ಲರಿಗೂ ಸರ್ಕ್ಯುಲೇಟ್ ಮಾಡಿದ್ದೇವೆ. ಅದಕ್ಕೆ ಆನ್ಸರ್ ಮಾಡಿ ನಮಗೆ ಇನ್ನೂ ಪೂರ್ಣ ಮಾಹಿತಿ ಬಂದಿಲ್ಲವೆಂಬ ಮಾತನ್ನು ಅವರು ಹೇಳಿದರು. ಅಧಿಕಾರ ನಡೆಸತಕ್ಕಂಥವರು ಮಾಹಿತಿ ಬಂದಿಲ್ಲವೆಂದು ಹೇಳಿದರು. ಬಂದಿದೆಯೆಂದು ನೀವು ಹೇಳಿದರೆ ಹೇಗೆ? ಬಂದಿದೆ ಅಥವಾ ಬಂದಿಲ್ಲವೆಂದು ಅವರು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಮೂಲಕ ನಾನು ಕೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಯಾರು ಬಡವರು ಬಡತನ ರೇಖೆಯಿಂದ ಕೆಳಗೆ ಇದ್ದಾರೆ ಎನ್ನುವುದನ್ನು ಐಡೆಂಟಿಫೈ ಮಾಡಿ, 92-93ರಿಂದ ಅವರಿಗೆ ಕಾರ್ಡು ಕೊಟ್ಟಿಲ್ಲ ಎನ್ನುವ

ವರದಿ ಬಂದಿದೆಯೆಂದು ನಾನು ಅಧಿಕೃತವಾಗಿ ಹೇಳುತ್ತಿದ್ದೇನೆ. ಬಂದಿಲ್ಲವೆಂದು ಅವರು ಹೇಳುವುದಾದರೆ ಅವರು ಅಧಿಕಾರಕ್ಕೆ ಬಂದು 7ತಿಂಗಳಾದರೂ ಕಾರ್ಡ್ ಇಲ್ಲದಿರುವವರನ್ನು ಐಟೆಂಟಿಫೈ ಮಾಡಿಲ್ಲವೆಂದರೆ, ಯಾವುದೋ ಒಂದು ಫಾರ್ಮೆಟ್ ಅನ್ನು ಮಾಡುತ್ತಿದ್ದೇವೆ, ಅದರ ಪ್ರಕಾರ ಮಾಡುವುದಕ್ಕೆ ಇನ್ನೂ ಆರು ತಿಂಗಳಾಗುತ್ತದೆ ಎಂದು ಹೇಳಿದರೆ ಇದು ಸರ್ಕಾರದ ಒಂದು ನಿರ್ಲಕ್ಷ್ಯತನವಾಗುತ್ತದೆ. ಮಾನ್ಯ ಮಂತ್ರಿಗಳು ಈ ರೀತಿ ಇದೆಯೆಂದು ಹೇಳಿದರು.....

ಅಧ್ಯಕ್ಷರು : 84 ಲಕ್ಷ ಕುಟುಂಬಗಳನ್ನು ಗುರುತಿಸಿದ್ದಾರೆ, 98 ಲಕ್ಷ ಕುಟುಂಬಗಳಿಗೆ ಕಾರ್ಡುಗಳನ್ನು ಕೊಟ್ಟಿದ್ದಾರೆ. ಇದು ಸ್ವಲ್ಪ ನ್ಯೂನತೆ ಇರುವುದರಿಂದ ಎಲ್ಲ ಪುನರ್ ವಿಮರ್ಶೆ ಮಾಡಿ ಹೊಸ ಫಾರ್ಮೆಟ್ ಪ್ರಕಾರ ಅರ್ಹರನ್ನು ಗುರುತಿಸುವ ಕೆಲಸವನ್ನು ಅಧಿಕಾರಿಗಳಿಗೆ ಒಪ್ಪಿಸಿದ್ದೇವೆ, ಆ ಬಗ್ಗೆ ಪೂರ್ಣ ಮಾಹಿತಿ ಇನ್ನೂ ಸರ್ಕಾರಕ್ಕೆ ಲಭ್ಯವಾಗಿಲ್ಲ ಎನ್ನುವ ಮಾತನ್ನು ಮಾನ್ಯ ಸಭಾನಾಯಕರು ಹೇಳಿದರು. ಇದು ಸ್ವಲ್ಪ ನಿಧಾನವಾಗಿದೆ, ಬೇಗ ಮಾಡಿ ಎಂದು ನೀವು ಸಲಹೆಯನ್ನು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಡುಬಡವರು ಯಾರಿಗೆ ಹಸಿರು ಕಾರ್ಡನ್ನು ಕೊಡಬೇಕಾಗಿದೆ, ಈ ಕೆಲಸವನ್ನು ಇಡೀ ರಾಜ್ಯದಲ್ಲಿ ಎಲ್ಲಿಯೂ ಮಾಡಿಲ್ಲ.

ಅಧ್ಯಕ್ಷರು : ನಾವು ಒಂದು ಕೆಲಸ ಮಾಡೋಣ. ನಿಮ್ಮದು ಮೋಶನ್ ಇದೆಯಲ್ಲ, ಅದರ ಮೇಲೆ ಚರ್ಚೆ ಮಾಡುವಾಗ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಡವರಿಗೆ ನಾವು ಏನು ಹೇಳುವುದು?

ಅಧ್ಯಕ್ಷರು : ಈ ವಿಷಯವನ್ನು ಮತ್ತೊಮ್ಮೆ ಚರ್ಚೆ ಮಾಡುವುದಕ್ಕೆ ಸಮಯ ಸಿಗುತ್ತದೆ.

ಶ್ರೀ ಕಮರುಲ್ ಇಸ್ಲಾಂ : ಕಾರ್ಡಿನ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆ ತೆಗೆದುಕೊಳ್ಳಬೇಕು. I request you Sir kindly to take up this subject for half-an-hour discussion. There are people even in Gulbarga who have not got the cards. Since 3 months cards are not available. You replace the cards afterwards but what about the people who have already been identified & did not get cards. ಎಲ್ಲಾ ಮತಕ್ಷೇತ್ರಗಳಲ್ಲೂ ಈ ತರಹ ನಡೆಯುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ

353 : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು ಕೈಗೊಂಡಿರುವ ಯೋಜನೆಗಳಾವುವು?

ಆ) ನವದೆಹಲಿಯಲ್ಲಿ ಪ್ರವಾಸೋದ್ಯಮ ಭವನವನ್ನು ನಿರ್ಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯ ಮಂತ್ರಿಗಳು) :

ಅ) ಪ್ರವಾಸೋದ್ಯಮವನ್ನು ವ್ಯಾಪಕವಾಗಿ ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಮೇ 1992ರಂದು ಪ್ರವಾಸೋದ್ಯಮ ನೀತಿಯನ್ನು ಘೋಷಿಸಿದೆ. ಈ ಪ್ರವಾಸೋದ್ಯಮ ನೀತಿಯ ಮೂಲ ಉದ್ದೇಶವೆಂದರೆ ಪ್ರವಾಸೋದ್ಯಮ ಸೌಲಭ್ಯಗಳಾದ ಹೋಟೆಲ್, ವೋಟೆಲ್ಸ್, ಹಾಲಿಡೇ ರಿಸಾರ್ಟ್ಸ್ ಅಮ್ಯೂಸ್‌ಮೆಂಟ್ ಪಾರ್ಕ್ಸ್